ನಮ್ಮ ಪ್ರಾಂತೀಕರಣ ಮತ್ತು ಏಕೀಕರಣ ಸಮಸ್ಯೆಗಳು

ಲೇಖಕರು
ಶ್ರೀ. ಕೆ. ಎಫ್. ಪಾಟೀಲ

[ಭಾರತ ಸ್ವತಂತ್ರವಾಗಿ ಇಂದಿಗೆ ಒಂದು ವರ್ಷ. ಸ್ವಾತಂತ್ರ್ಯದ ಹಿಂದಿನಿಂದಲೇ ಭಾಷಾವಾರು ಪ್ರಾಂತರಚನೆ ಅಗಿಯೇ ಸಿದ್ಧ ಎಂದು ನಂಬಿದ್ದ ಭಾಷಾ ಪ್ರೇಮಿಗಳಿಗೆ, ಮುಖ್ಯವಾಗಿ ಕನ್ನಡಿಗರಿಗೆ, ಸ್ವಾತಂತ್ರ್ಯದ ಮೊದಲ ವಾರ್ಷಿಕೋತ್ಸವದ ದಿನ, ಪ್ರಾಂತೀಕರಣದ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಎರಡು ಕೋಟಿ ಕನ್ನಡಿಗರ ನ್ಯಾಯವಾದ ಬೇಡಿಕೆಯೊಂದರ ಪೂರೈಕೆಗೆ ತಡೆಯಾಗಿರುವ ಮುಂದಾಳುಗಳ ಸ್ವಾರ್ಥ, ಪ್ರಾದೇಶಿಕತೆಯ ಕೊಳೆ, ಪ್ರಾಂತೀಯತೆಯ ಅಸಹಜ ಅಪವಾದ ಇನ್ನೆಲ್ಲವುಗಳನ್ನು ಬಗೆಹರಿಸಿ, ಪ್ರಾಂತರಚನೆಯಾಗಬೇಕಾಗಿದೆ. ಈ ತಡೆಗಳನ್ನೆಲ್ಲ ಇದಿರಿಸಿ, ಕರ್ನಾಟಕ ಪ್ರಾಂತ ರೂಪುಗೊಳ್ಳಲೇಬೇಕು– ಎಂದು ಪ್ರಶ್ನೆಯ ಪೂರ್ವಾಪರಗಳನ್ನು ಈ ಲೇಖನದಲ್ಲಿ, ಮುಂಬಯಿಯ ಸರಕಾರದ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಕೆ. ಎಫ್. ಪಾಟೀಲರು ಚರ್ಚಿಸುತ್ತಾರೆ. ಸಂ.]

ಭಾಷಾವಾರು ಪ್ರಾಂತಗಳ ರಚನೆಯ ಸಂಬಂಧದ ಸಮಸ್ಯೆ ಇದೀಗ ಒಂದು ನಿಶ್ಚಿತ ಸ್ವರೂಪಕ್ಕೆ ಬರಹತ್ತಿದೆ. ಘಟನಾ ಸಮಿತಿ ರಚಿತವಾದಾಗಿನಿಂದಲೂ ಉಪ ಸಮಿತಿ ಸಂಯುಕ್ತ ಸಭೆಗಳಲ್ಲಿ ನಡೆದ ಚರ್ಚೆ, ಮುಖಂಡರುಗಳ ಪರಸ್ಪರ ಅನುಕೂಲ ಹಾಗು ವಿರೋಧದ ಹೇಳಿಕೆ ಪ್ರತಿ ಹೇಳಿಕೆಗಳಿಂದ ಈ ಸಮಸ್ಯೆಗೊಂದು ಕತ್ತಲು ಕವಿದುಕೊಂಡಂತಾಗಿತ್ತು. ಜನ ಸಾಮಾನ್ಯರಲ್ಲಿ ಆಶೆ ನಿರಾಶೆಗಳು ಕಾಲಕಾಲಕ್ಕೆ ಮೂಡಿ ಮಾಯವಾಗುತ್ತಿದ್ದವು. ಆದರೆ ಯಾವ ಪ್ರಾಂತಗಳು ಪ್ರತ್ಯೇಕವಾಗಬೇಕೆಂಬುದನ್ನು ಸೂಚಿಸಲು ತಜ್ಞಿರ ಸಮಿತಿಯೊಂದು ಇತ್ತೀಚೆಗೆ ನಿಯುಮಿತವಾದಂದಿನಿಂದ ಈ ಸಮಸ್ಯೆ ನಿಶ್ಚಿತತೆಯ ಕಡೆಗೆ ಮುಖವೆತ್ತಿದೆ ಎಂಬ ಕಲ್ಪನೆಯಾಗಿದೆ; ನಿಶ್ಚಿತ ಆಸೆಗೆ ಅನುವಾಗಿದೆ. ಈ ವರ್ಷಾಂತ್ಯದಲ್ಲಿ ಏನಾದರೊಂದು ನಿರ್ಧಾರಕ್ಕೆ ಬರಬಹುದಾಗಿದೆ.

ಬಹುದಿನಗಳ ಪ್ರಶ್ನೆ

ತಾತ್ವಿಕವಾಗಿ ಈ ಸಮಸ್ಯೆಯನ್ನು ಕಾಂಗ್ರೆಸು ಒಪ್ಪಿ ಕಾಲು ಶತಮಾನದ ಮೇಲಾಯಿತು. ದಿ. ಮಹಾತ್ಮ ಗಾಂಧಿಯವರು ಈ ಸಮಸ್ಯೆಗೆ ಆಶೀರ್ವಾದವಿತ್ತು ದಲ್ಲದೆ ಮಾತೃಭಾಷಾ ಸೇವೆಗೆ ತಮ್ಮ ವಿಧಾಯಕ ಕಾರ್ಯಕ್ರಮಗಳಲ್ಲೊಂದು ಸ್ಥಾನ ಕಲ್ಪಿಸಿದ್ದಾರೆ. ಹೀಗಿದ್ದಾಗಲೂ ದಕ್ಷಿಣಾತ್ಯರ ಭಾಷಾವಾರು ಪ್ರಾಂತದ ಬೇಡಿಕೆಯನ್ನು ಉತ್ತರದ ಕೆಲ ಮುಖಂಡರು ವಿಪರೀತವಾಗಿ ಭಾವಿಸಿಕೊಂಡಿರುವದು ತುಂಬಾ ಶೋಚನೀಯವಾಗಿದೆ. ಪ್ರಾಂತೀಕರಣದ ಬೇಡಿಕೆ ಪ್ರತ್ಯೇಕತೆಯ ಲಕ್ಷಣವೆಂದೂ ಜಾತೀಯತೆಯಂತೆ ಅದು ಹೇಯವೆಂದೂ ಅದರಿಂದ ಕೇಂದ್ರದ ಶಕ್ತಿ ಕುಗ್ಗುವದೆಂದೂ, ದೊರೆತ ಸ್ವಾತಂತ್ರ್ಯ ಭದ್ರಗೊಳಿಸಲು ಅಡಚಣಿ ಬರುವದೆಂದೂ ಏನೇನೋ ಕಾರಣಗಳನ್ನು ಹೇಳಿ ಆತ್ಮ ಸಮರ್ಥನೆ ಮಾಡಿಕೊಳ್ಳುವ ಮುಖಂಡರುಗಳು ಕೇವಲ ತಪ್ಪು ಗ್ರಹಿಕೆಗಳ ಮೇಲೆ ನಿಂತಿದ್ದಾರೆನ್ನಬಹುದು ಕೆಲವರಂತೂ ಭಾಷಾವಾರ ಪ್ರಾಂತೀಕರಣದ ಪುರಸ್ಕರ್ತರು ದೇಶದ್ರೋಹಿಗಳೆನ್ನುವಷ್ಟು ದೂರ ಹೋಗಿದ್ದಾರೆ.

ನ್ಯಾಯವಾದ ಬೇಡಿಕೆ

ಪ್ರಾಂತಗಳಾವವೂ ಇರಕೂಡದೆಂಬುವಾದವರು ನಮ್ಮ ಪ್ರಾಂತೀಕರಣದ ಬೇಡಿಕೆಯನ್ನು ಅಲ್ಲಗೆಳೆದರೆ ನಮಗೆ ಅರ್ಥವಾಗುತ್ತದೆ. ಅಂಥವರೊಡನೆ ನಮ್ಮ ಜಗಳವಿಲ್ಲ. ಆದರೆ ಇದ್ದ ಪ್ರಾಂತಗಳು ಇದ್ದಂತೆಯೇ ಇರಬೇಕು; ಅವುಗಳಲ್ಲಿ ಅನ್ಯಾಯ ಕೊಳೆಗಳು ತುಂಬಿದ್ದರೂ ಸಹಿಸಿಕೊಂಡು ಹೋಗುವದೇ ರಾಷ್ಟ್ರೀಯತೆ ಎಂಬುವವರವಾದ ನಮಗೆ ಅರ್ಥವಾಗುವದಿಲ್ಲ. ಅನ್ಯಾಯವನ್ನು ದೂರಮಾಡಿರೆಂದು ಕೇಳುವದು ದೇಶ ದ್ರೋಹವಾಗುತ್ತಿದ್ದರೆ ಅಂಥ ದೇಶ ದ್ರೋಹವನ್ನು ಸಾಧಿಸುವದೇ ನಮ್ಮ ಗುರಿಯಾಗಬೇಕೆಂದು ಗುರು ಗಾಂಧಿ ಮಹಾತ್ಮರು ಕಲಿಸಿದ ಮಂತ್ರದಲ್ಲಿ ಕನ್ನಡಿಗರಂತೂ ತಜ್ಞರಾಗಿದ್ದಾರೆ. ಯಾವುದೆ ಐತಿಹಾಸಿಕ ಭೌಗೋಲಿಕ, ಆರ್ಥಿಕ ಇಲ್ಲವೆ ಆಡಳಿತದ ತತ್ವಗಳ ಬುನಾದಿ ಇಲ್ಲದೆ ಅಸ್ತಿತ್ವದಲ್ಲಿರುವ ಪ್ರಾಂತಗಳನ್ನು ಬದಲಿಸಿ ಸಮಂಜಸ ನ್ಯಾಯ ಹಾಗು ಸರ್ವರ ಅಭಿವೃದ್ಧಿಗಳ ಅನುಕೂಲಕ್ಕಾಗಿ ಮತ್ತು ಕೇಂದ್ರವನ್ನು ಬಲಪಡಿಸುವಂತೆ ಪ್ರಾಂತ್ಯದ ಗಡಿಗಳನ್ನು ಬದಲು ಮಾಡಿರೆಂದು ಕೇಳುವದು? ದೇಶ ದ್ರೋಹವೆಂದು ಬಹಿರಂಗವಾಗಿ ಸಾರುವ ಮುಖಂಡರ ಸದುದ್ದೇಶಗಳಲ್ಲಿ ಅನ್ಯಾಯಕ್ಕೊಳಗಾದವರು ಶಂಕೆಯುಳ್ಳವರಾದರೆ ತಪ್ಪೇನು? ನೊಂದ ನೋವ ನೋಯದವರೆತ್ತ ಬಲ್ಲರು? ನಮ್ಮ ಅಡೆತಡೆ ಹಾಗು ಸಂಕಟಗಳನ್ನು ಮಾತ್ರ ಮುಂದೆ ಮಾಡಿ ಮಾತ್ರನಯಲ್ಲದೆ, ಸರ್ವರ ನೈಜ ಹಾಗು ನ್ಯಾಯವಾದ ಅಭಿವೃದ್ಧಿ ಹಾಗು ಕೇಂದ್ರದ ಭದ್ರತೆ ಸಂಪತ್ತುಗಳಿಗೆ ನೆರವಾಗಬೇಕೆಂದೇ ನಾವು ಭಾಷಾವಾರ ಪ್ರಾಂತೀಕರಣ ಬೇಡತ್ತಿದ್ದೆವೆಂಬುದನ್ನು ಉತ್ತರದ ಮುಖಂಡರಿಗೆ (ನಮ್ಮಲ್ಲಿಯ ಕೆಲವರಿಗೂ) ಮನಗಾಣಿಸಿಕೊಡುವದು ನಮ್ಮ ಮುಖಂಡರಿಂದಾಗಿಲ್ಲವಾಗಿದೆ ಎಂದು ತೋರುತ್ತದೆ. ಅಂತೆಯೆ ಹಿಂದಿನ ಕಾಂಗ್ರೆಸ ಅಧ್ಯಕ್ಷ ಆಚಾರ್ಯ ಕೃಪಲಾನಿಯಂಥವರು ನಮ್ಮ ಮೇಲೆ ಆ ಬಗೆಯ ಆರೋಪ ಹೊರಿಸಲೆತ್ನಿಸಿದ್ದಾರೆ. ಇಂಥ ಆರೋಪ ಹೇರಿ ನಮ್ಮನ್ನು ಸುಮ್ಮನಿರಿಸುವದು ಸುಲಭವೆಂದು ಅಂಥವರು ಬಗೆದಂತೆ ತೋರುತ್ತದೆ. ಅವರ ಮುಖಂಡತ್ವದಲ್ಲಿ ಕಳೆದ ಎರಡು ವರ್ಷಗಳಿಂದಲೂ ಅಚಲ ಶ್ರದ್ಧೆ, ಏಕನಿಷ್ಠೆಗಳನ್ನಿರಿಸಿಕೊಂಡು ಭಾರತದ ಬಂಧ ವಿಮೋಚನೆಗಾಗಿ ದುಡಿದುದನ್ನು ಅವರು ಮರೆತಿರಲಾರರು. ಭಾರತದ ತುಂಬು ಕಲ್ಪನೆ, ಅಭಿಮಾನಗಳು ತಮಗೆ ಮಾತ್ರ ಮೀಸಲೆಂದೂ, ಭಾರತದ ಹಿತ ಚಿಂತನ ತಮ್ಮ ಹೊಣೆ ಮಾತ್ರವೆಂದೂ, ಅವರಲ್ಲುಂಟಾದ ಭಾವನೆಯೇ ಅವರ ಈ ಅನುಚಿತ ಧೋರಣಕ್ಕೆ ಕಾರಣವಾಗಿರಬಹುದೇನೋ ಅನಿಸುವಂತಾಗಿದೆ. ಅಥವಾ ಅಖಿಲ ಭಾರತದ ನಾಯಕತ್ವ ವಹಿಸಿ ನಾಡನ್ನಾಕೆಯನ್ನು ನಡೆಸಬಲ್ಲ ಚಾಣಾಕ್ಷ ಜನಪ್ರಿಯ ನಾಯಕರು ದಕ್ಷಿಣ ಭಾರತದಲ್ಲಿ ಇಲ್ಲವೆಂಬುದೇ ಈ ಪ್ರಶ್ನೆ ಕಡೆಗಣಿಸಲ್ಪಡುತ್ತಿರುವದಕ್ಕೆ ಕಾರಣವಾಗಿರಬಹುದೆ?

ನಮ್ಮ ನ್ಯಾಯವಾದ ಹಕ್ಕಿನ ಬೇಡಿಕೆಗೆ ದೇಶ ದ್ರೋಹವೆನ್ನುವ ಸಾಹಸಿಗಳಿಗೆ ನಾವು ಪ್ರತಿಭಟನೆಯನ್ನೂ ಮಾಡಲಾರದವರಾದರೆ ನಮ್ಮ ಭವಿಷ್ಯವೇನು?

ಆಂತರಿಕ ಕೊರಳ ಕತ್ತರಿ

ಕಳೆದ ಮೂವತ್ತು ವರ್ಷಗಳಿಂದಲೂ ಕರ್ನಾಟಕ ಏಕೀಕರಣವೆಂದು ಕನವರಿಸಿದವರಿಂದು ಕಾಣೆಯಾಗಿದ್ದಾರೆ; ಗುಡುಗಿದವರಿಂದು ನಮ್ಮನ್ನ ಗಲಿದ್ದಾರೆ. ಅವರ ಪರಿಶ್ರಮದ ಫಲವಾಗಿ ನಮ್ಮಲ್ಲಿ ಹೊಸ ದೃಷ್ಟಿ ಬಂದು ನಮ್ಮ ಅರಿವು ನಮಗಾಗಿದೆ. ಏಕೀಕರಣ ಚಳುವಳಿ ಕೆಲ ಕಾಲ ರಾಷ್ಟ್ರೀಯತೆಯ ನೆರಳಿನಲ್ಲಿ ಚೆನ್ನಾಗಿ ಬೆಳೆದು ಬಂದಿತಾದರೂ ರಾಜಕೀಯ ಸ್ವಾತಂತ್ರ್ಯ ದೊರೆತ ಈ ಕಾಲದಲ್ಲಿ ಅದಕ್ಕೆ ಕೊಡಲಿ ಬೀಳಹತ್ತಿದ್ದು ಶೋಚನೀಯ. ಒಂದೆಡೆ: ಉತ್ತರದ ಮುಖಂಡರಿಂದ ಬರುವ ಆಘಾತ, ಇನ್ನೊಂದೆಡೆ ಆಂತರಿಕವಾದ ಕೊರಳ ಕತ್ತರಿ ಹೊರಗಿನದನ್ನು ಎದುರಿಸಿ ಜೈಸಬಹುದು. ಆಂತರ್ಯದ ವ್ಯಾಧಿ ಮಹಾ ಕಂಟಕವಾಗ ಹತ್ತಿದೆ. ಈವರೆಗೆ ನಮ್ಮ ಚಟುವಟಿಕೆಗೆ ಕನ್ನಡಿಗರಿಂದ ಪ್ರತ್ಯಕ್ಷವಾದ ವಿರೋಧಬಂದಿರಲಿಲ್ಲ. ಆದರೆ ನಮಗೆ ಸ್ವಾತಂತ್ರ್ಯ ದೊರೆತು, ಚಿಕ್ಕ ಪುಟ್ಟ ಸಂಸ್ಥಾನಗಳು ವಿಲೀನ ಹೊಂದಿ ದೊಡ್ಡ ಸಂಸ್ಥಾನಗಳಲ್ಲಿ ಜವಾಬದಾರಿ ರಾಜ್ಯ ನಡೆಯುತ್ತಿದ್ದಾಗ ಬರುತ್ತಿದ್ದ ಆತಂಕಗಳನ್ನು ನೋಡಿದರೆ ನಂಬುವದೂ ಕಠಿಣವಾಗಿದೆ.

ಮೈಸೂರು ಮುಖಂಡರ ದ್ರೋಹ

ಇತ್ತೀಚೆಗೆ ಮೈಸೂರ ಘಟನಾ ಸಮಿತಿಯವರು ಮಾಡಿಕೊಂಡ ಗೊತ್ತುವಳಿಯೊಂದನ್ನು ಅಭ್ಯಸಿಸಿದರೆ ಕರ್ನಾಟಕ ಪ್ರಾಂತೀಕರಣ ಮತ್ತು ಏಕೀಕರಣಗಳ ಕನಸು ಒಡೆದು ಬೈಲಾಗುವಂತಿದೆ. ಕನ್ನಡ ಕುಲವೆಲ್ಲ ಒಂದೆ; ಕನ್ನಡಿಗರೆಲ್ಲ ಒಂದೆ ಆಡಳಿತಕ್ಕೊಳಪಟ್ಟ ಸ್ವಾತಂತ್ರ್ಯದ ಫಲವನ್ನು ಇತರ ಪ್ರಾಂತೀಯರೊಡನೆ ಸರಿಸಮಾನಿಕರಾಗಿ ಸವಿಯಬೇಕು; ಪ್ರಜಾ ಪ್ರಭುತ್ವದ ಅತ್ಯುತ್ತಮ ರಾಜ್ಯ ಪದ್ಧತಿ ನಿರ್ಮಾಣದಲ್ಲಿ ಕನ್ನಡಿಗರೂ ತಕ್ಕ ಸೇವೆ ಸಲ್ಲಿಸಿ ಭಾರತದ ಆಗು ಹೋಗುಗಳಲ್ಲಿ ಮಹತ್ತರ ಪಾತ್ರಗಳನ್ನಾಡಬೇಕು; ಎಂಬವೇ ಮೊದಲಾದ ಮನಸಿನ ಮಂಡಿಗೆಗಳೆಲ್ಲ ಮಾಯವಾಗುವಂತಿವೆ. ಆ ರೀತಿಯ ನಿರ್ಣಯಕ್ಕೆ ಮೈಸೂರಿನ ಮುಖಂಡರು ಬರುವದಕ್ಕೆ ನಾಡ ಹಿತದೃಷ್ಟಿಯ ಕಾರಣಗಳೇನಿವೆಯೋ ನಮ್ಮ ಬುದ್ಧಿಗೆ ಹೊಳೆಯದ ಮಾತು. ಆದರೆ ಆ ನಿರ್ಣಯದಿಂದಾದ ಕಹಿ ಫಲವು ಸಾತ್ರ ಸರ್ವ ಕನ್ನಡಿಗರ ಪಾಲಿಗೆ ಬಂದಿಫೆ. ಅವರು ಈ ಬಗೆಗೆ ಏನು ಯ ಮಾಡದೆ, ಇನ್ನು ಕೆಲ ಕಾ ಅಭಿಪ್ರಾಯ ವ್ಯಕ್ತ ಮಾಡದೆ, ಅಥವಾ ಆ ಬಗ್ಗೆ ವಿವರಗಳನ್ನು ದ್ಯರೆದಿ ಮಾಡಲು ಉಪ ಸಮಿತಿಯೊಂದನ್ನು ನಿರ್ಮಿಸಿದ್ದರೆ ಅದರಿಂದ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ನೆರವಾಗುತ್ತಿತ್ತೆಂದು ಹೇಳಬಹುದು. ಈಗ ಮಾಡಿದ ನಿರ್ಣಯದ ಮೇಲೆಯೆ ಸುಂದರವಾಗಿ ನಿರ್ದೋಷವಾಗಿದ್ದುದಾಗಿ ತೋರಿದರೂ ಅದು ಕನ್ನಡಿಗರ ಪ್ರತ್ಯೇಕ ಪ್ರಾಂತೀಕರಣ ಚಟುವಟಿಕೆಗಳಿಗೆ ಮಾರಕವಾಗಿದೆ. ಮೈಸೂರಿನ ದಕ್ಷಿಣಕ್ಕಿರುವ ಕನ್ನಡ ಪ್ರದೇಶಗಳು ಉತ್ತರದ ಪ್ರದೇಶಗಳೊಡನೆ ಕೂಡಿಕೊಳ್ಳುವ ಸಂಧಿ ಸಂದರ್ಭಗಳನ್ನೆಲ್ಲ ಮೈಸೂರು ಹೊಡೆದು ಹಾಕಿ ಅವುಗಳ ಭವಿತವ್ಯ ತನ್ನ ಮೇಲೆ ಅವಲಂಬಿಸುವಂತೆ ಅದು ಪ್ರತ್ಯಕ್ಷವಾಗಿ ಮಾಡಿದೆ. ಮೈಸೂರು ಹೈದರಾಬಾ

(೨೧ನೇ ಪುಟ ನೋಡಿರಿ)



ದಗಳನ್ನುಳಿದ ಪ್ರತ್ಯೇಕ ಕರ್ನಾಟಕ ಪ್ರಾಂತ ರಚನೆಗೆ ಬಲವಾದ ಆಘಾತ ಮಾಡಿದೆ. ಇದು ಈ ಕಾಲಕ್ಕೆ ಅನವಶ್ಯಕವಾಗಿತ್ತೆಂದು ನಮ್ಮ ನಮ್ರ ಮತ.

ಮೈಸೂರಿನ ವೈಶಿಷ್ಟ್ಯಕ್ಕಾಗಿ ನಮ್ಮಗೆ ಅಸೂಯೆಯಿಲ್ಲ. ಮೈಸೂರ ಅಭಿವೃದ್ಧಿಗಾಗಿ ನಮಗೆ ಹೆಮ್ಮೆ ಇದೆ. ಆದರೆ ಆತ್ಮ ಘಾತುಕವಾದ ಸಂಕುಚಿತ ಧೋರಣೆ ಹಾಗು ನಡವಳಿಕೆಗಳಿಂದ ಮೈಸೂರು ಮತ್ತು ಇತರ ಕರ್ನಾಟಕ ಭಾಗಗಳಿಗೆಲ್ಲ ಅನಿಷ್ಟವಾಗುತ್ತಿದ್ದಾಗ ಬಂಧುಗಳೆಂಬ ಭಾವನೆಯಿಂದ ಮೈಸೂರಿನವರಿಗೆ ತಮ್ಮ ಗೊತ್ತುವಳಿಯನ್ನು ಪುನರ್ವಿಮರ್ಶಿಸಿಕೊಳ್ಳಲು ಕೇಳುವುದು ಸ್ವಾಭಾವಿಕವಿದೆ. ವೈಶಿಷ್ಟ್ಯದ ಅತಿರೇಕ ಸ್ವಪ್ರದೇಶಹಿತಗಳೆರಡಕ್ಕೂ ಮಾರಕವೆಂಬ ತತ್ವವನ್ನು ಮೈಸೂರು ನಾಯಕರು ಸ್ವಾನುಭವದಿಂದಲೇ ಕಲಿಯಲು ಆತುರರಾಗಿರಲಾರರು.

ಸಲ್ಲದ ಪ್ರಾಶಸ್ತ್ಯ ಕೊಟ್ಟ ತಪ್ಪು

ಮೈಸೂರಿನವರು ಈ ರೀತಿ ಗೊತ್ತುವಳಿ ಮಾಡಲು ಮೈಸೂರೇತರರೂ ಕೆಲಮಟ್ಟಿಗೆ ಕಾರಣರಾಗಿದ್ದೇವೆಂದು ತೋರುತ್ತದೆ. ಸಾಹಿತ್ಯಿಕ ಸಾಂಸ್ಕೃತಿಕ, ರಾಜಕೀಯಗಳಲ್ಲಿ ಕಳೆದ ನಷ್ಟಗಳಿಂದ ಮೈಸೂರುನಾಯಕರಿಗೆ ನಾವು ಸಲ್ಲದ ಪ್ರಾಶಸ್ತ್ಯ ಕೊಡುತ್ತಾ ಬಂಧುದರಿಂದ ಮೈಸೂರ ನಾಯಕರು ವಾಸ್ತವತೆಯನ್ನು ಮರೆತಂತೆ ತೋರುತ್ತಿದೆ. ಕನ್ನಡಿಗರೆಲ್ಲರೂ ಒಂದಾಗಬೇಕೆಂಬ ಮೂಲ ಮಂತ್ರವನ್ನು ಅವರು ಮರೆತು ಅಥವಾ ಬದಿಗಿರಿಸಿ ಮಹಾರಾಜರ ಸಮಸ್ಯೆಯನ್ನೇ ಪೆಡಂಭೂತವನ್ನಾಗಿ ಮಾಡಿರುವುದರ ರಹಸ್ಯ ಸಹಜವಾಗಿ ಹೊಳೆವ ಮಾತಲ್ಲ. **ಈ ಮುಖಂಡರು ಮಹಾರಾಜರಲ್ಲಿ ನಿಜವಾಗಿಯೂ ಅಪ್ಪಿಂದು ಭಕ್ತಿಯು ತರಾಗಿದ್ದಾರೆಂಬುದು ನಂಬದ ಮಾತಾಗಿದೆ. ಮಹಾರಾಜರ ಸ್ಥಾನಮಾನವನ್ನುಳಿಸಿಕೊಳ್ಳುವದು ಮಾತ್ರವಲ್ಲದೆ ಅವನ್ನು ಇನ್ನೂ ಭದ್ರಪಡಿಸುವದರ ಕಡೆಗೆ ಮುಖವಿಡಹತ್ತಿದ ಮೈಸೂರು ನಾಯಕರ ಈ ಹಿಂದಿನ ರಾಜತ್ವದ ವಿರೋಧದ ಆವೇಶದ ಆಕ್ರೋಶಗಳನ್ನು ಪ್ರತ್ಯಕ್ಷಕ್ಕೆ ಳಿದವರು ಇದನ್ನು ನಂಬುವದು ಸಾಧ್ಯವಿಲ್ಲದಾಗಿದೆ.**

ಮುಖಂಡರು ಬಗೆಯುತ್ತಿರುವ ದ್ರೋಹ

ಮೈಸೂರಿನ ಇಂಥ ನಾಯಕರೊಡನೆ ಕೈ ಕುಲಕಿ ಅವರ ಜಾಲಕ್ಕೆ ಬಲಿಬಿದ್ದ ಮೈಸೂರೇತರ ಕನ್ನಡಿಗರನೇಕರು ಮಹಾರಾಜರ ಮೆರವಣಿಗೆಯನ್ನೇ ಮುಖ್ಯ ಸಮಸ್ಯೆಯನ್ನಾಗಿರಿಸಿಕೊಂಡಂತೆ ತೋರಹತ್ತಿದೆ. ಅಖಿಲ ಕನ್ನಡ ನಾಡು ಹಾಗು ಜನತೆಯ ಭವಿತವ್ಯಕ್ಕಿಂತ ಮಹಾರಾಜರ ಭದ್ರತೆಯೇ ನಮ್ಮವರಿಗೆ ಮಹತ್ವದಾಗಿ ತೋರಹತ್ತಿದ್ದು ಕನ್ನಡಿಗರ ದುರ್ದೈವವಾಗಿದೆ. ನಾಡಿನ ಮತ್ತು ನಾಡ-ಜನತೆಯ ಸಮಸ್ಯೆಯಲ್ಲಿ ಮಹಾರಾಜರ ಸಮಸ್ಯೆಯೂ ಸಹಜವಾಗಿ ಸುಲಭವಾಗಿ ಬಿಡಬಹುದಾಗಿದ್ದರೂ ಅದನ್ನು ಇಂದು ನಾಡು ಹಾಗು ಜನತೆಗಳಿಗಿಂತ ಮೇಲ್ಮಟ್ಟದಲ್ಲಿರಿಸಿ ಹೋದವರು ಮಹಾರಾಜರ ಸ್ಥಾನಮಾನಗಳಿಗೆ ಭದ್ರತೆಗಿಂತ ಅಭದ್ರತೆಯನ್ನೇ ಹೆಚ್ಚಿಗೆ ಮಾಡಿದ್ದಾರೆಂಬದು ಇದೀಗ ಸ್ಪಷ್ಟವಾಗತೊಡಗಿದೆ. ನಾಯಕರ ಈ ರೀತಿಯ ನಿರ್ಣಯಕ್ಕೆ ಮೈಸೂರ ಜನತೆ ಒಪ್ಪುತ್ತಿಲ್ಲವೆಂಬದೂ, ಇದು ಮೈಸೂರ ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತಿಲ್ಲವೆಂಬದೂ, ಬೈಲಿಗೆ ಬರಹತ್ತಿದೆ. ಮೈಸೂರ ಜನತೆ ನಾಯಕರ ಈ ನಿರ್ಣಯವನ್ನು ಪ್ರತಿಭಟಿಸುವ ಹಾಗು ಅವ್ಹಾನಿಸುವ ಲಕ್ಷಣಗಳು ಆಶಾದಾಯಕ ಚಿನ್ಹೆಗಳೆಂದು ಹೇಳಬೇಕು.

ಶಕ್ಯವಾದರೆ ಮೈಸೂರ ಮಹಾರಾಜರನ್ನುಳಿದು, ಅನಿವಾರ್ಯವಾಗುತ್ತಿದ್ದರೆ ಅವರೆನ್ನೊಳಗೊಂಡು (ಅವರೂ ಒಬ್ಬ ಕನ್ನಡಾಭಿಮಾನಿ ಹೆಮ್ಮೆಯ ಪುತ್ರನೆಂದು ಜನತೆ ಭಾವಿಸುವೆನೆಂತಾದರೆ) ಸರ್ವಮ್ಮಾನ್ಯವಾದ ಅಖಂಡ ಕರ್ನಾಟಕ ಪ್ರಾಂತ್ಯದ ರಚನೆ ಕೂಡಲೆ ಈಡೇರುವದು ಅಶಕ್ಯವೂ ಅವ್ಯವಹಾರವೂ ಆಗಲಿಕ್ಕಿಲ್ಲ. ಆದರೆ ಆ ರೀತಿ ಪ್ರಾಂತ ರಚನೆಯ ಹುಚ್ಚು ನಮ್ಮ ಮುಖಂಡರಿಗೆ ಹತ್ತಿದಾಗ ಮಾತ್ರ ಸಾಧ್ಯ. ಜನತೆ ಯಾವಾಗಲೂ ಸಿದ್ಧವಿದೆ, ಮುಖಂಡರು ಸರಿಯಾದ ಮಾರ್ಗದೋರಿದರೆ ಕೆಲಸವಾಗುವದರಲ್ಲಿ ಸಂದೇಹವಿರದು.

ಸ್ವಾವಲಂಬನದ ಪ್ರಶ್ನೆ

ನಮ್ಮ ರಾಜಕಾರಣ ಹೆಚ್ಚಾಗಿ ವ್ಯಕ್ತಿಗಳನ್ನು ವಲಂಬಿಸಿರುವುದು, ನಮ್ಮ ಕಾರ್ಯಕ್ಕೆ ದೊಡ್ಡ ಅಡಚಣೆಯಾಗಿದೆ ನಮ್ಮ

ನಮ್ಮ ಪ್ರಾಂತೀಕರಣ ಮತ್ತು ಏಕೀಕರಣ ಸಮಸ್ಯೆಗಳು

(೮ನೇ ಪುಟದಿಂದ ಮುಂದುವರಿದುದು)

ಸಮಸ್ಯೆಗಳೆಲ್ಲ ನಾಯಕರ ಬೀಳು ಏಳುಗಳನ್ನು ಅವರ ಸ್ಥಾನಮಾನಗಳನ್ನು ಅವಲಂಬಿಸಿವೆ. ಇದರಿಂದಾಗಿ ನಮ್ಮ ನಿಜವಾದ ಸಮಸ್ಯೆಗಳು ಎಲ್ಲಿಯೋ ಉಳಿದು ಬಿಟ್ಟಿವೆ.

ಹೈದರಾಬಾದು ಕರ್ನಾಟಕ

ಮೈಸೂರಿನಂತೆ ಹೈದರಾಬಾದಿನ ಸಮಸ್ಯೆಯೂ ಕನ್ನಡಿಗರಿಗೆ ಸಂಬಂಧಿಸಿದೆ. ಹೈದರಾಬಾದಿನ ಹೋರಾಟ ಮುಗಿವವರೆಗೂ ಏಕೀಕರಣದ ಚಟುವಟಿಕೆ ನಿಲ್ಲಬೇಕೆಂದು ಕೆಲವರ ವಾದ. ಮೈಸೂರು ಹೈದರಾಬಾದದ ಕನ್ನಡ ಭಾಗ ಸೇರದೆ ಏಕೀಕರಣ ಪೂರ್ತಿಯಾಗದು. ಆದರೆ ಏಕೀಕರಣದ ಮೊದಲ ಮತ್ತು ಮಹತ್ವದ ಹೆಜ್ಜೆ ಎಂದು ತೊಡಕಿನ ಹೈದರಾಬಾದವನ್ನುಳಿದು ಪ್ರತ್ಯೇಕ ಕರ್ನಾಟಕ ಪ್ರಾಂತವಾಗುವುದು ಸಾಧ್ಯವಿದ್ದರೆ ಅದನ್ನು ಮೊದಲು ಸಾಧಿಸಲೆತ್ನಿಸುವದು ಹೈದರಾಬಾದಿನ ಹೋರಾಟಕ್ಕೆ ಯಾವ ರೀತಿ ಅಡಚಣೆಯನ್ನು ತಂದೀತೋ ತಿಳಿಯದಾಗಿದೆ. ಹೈದರಾಬಾದಿನ ಹೋರಾಟ ಮುಗಿದ ಮೇಲೆಯೇ ನಮ್ಮ ಪ್ರಯತ್ನಗಳು ಮೊದಲ್ಗಾಗಬೇಕೆಂದು ಯಾರೂ ವಾದಿಸಲಾರರು. ಹೈದರಾಬಾದಿನ ಬಂಧವಿಮೋಚನೆಗೆ ಪ್ರತಿಯೊಬ್ಬ ಕನ್ನಡಿಗನು ಹೊಣೆ ಎಂಬುದರಲ್ಲಿ ಸಂದೇಹವಿಲ್ಲ. ಆ ದಿಸೆಯಲ್ಲಿ ಕನ್ನಡಿಗರು ಸೇವೆ ಸಲ್ಲಿಸುತ್ತಲೂ ಇದ್ದಾರೆ. ಇನ್ನು ಹೆಚ್ಚಾಗಿ ಹೋರಾಟದಲ್ಲಿ ಪಾತ್ರವಹಿಸುವುದೂ ಅವಶ್ಯವಿದ್ದೆ. ಕನ್ನಡಿಗರು ತಮ್ಮ ಪಾಲಿನ ಕರ್ತವ್ಯಪಾಲನೆಯಲ್ಲಿ ಹಿಂದೆ ಬೀಳಲಾರರು.

ಮಾದರಿ ಮೈಸೂರನ್ನನುಸರಿಸಿದರೆ..?

ನಾಳೆ ಹೈದರಾಬಾದದಲ್ಲಿಯೂ ಮೈಸೂರಿನಂತೆ ಒಂದು ವೇಳೆ ಹೊಣೆಗಾರ ಆಡಳಿತೆ ಪ್ರಾರಂಭವಾಯಿತೆಂದು ಕಲ್ಪಿಸುವ. ಹೈದರಾಬಾದಿನ ಕನ್ನಡ ನಾಯಕರು ಹೈದರಾಬಾದಿನ ನಿಜಾಮರನ್ನೇ ಶಾಸನಬದ್ಧ ಅರಸರೆಂದು ಒಪ್ಪಿಕೊಂಡರೆ ಮಾತ್ರ ಕರ್ನಾಟಕದಲ್ಲಿ ಸೇರುವೆವು ಅಥವಾ ಹೈದರಾಬಾದಿಗೊಂದು ವೈಶಿಷ್ಟ್ಯವಿದೆ. ಆದ್ದರಿಂದ ಇತರ ಕರ್ನಾಟಕ ಭಾಗಗಳು ಹೈದರಾಬಾದನ್ನು ಸೇರಬೇಕೆಂದು ಹಟ ಹಿಡಿದರೆ ಕನ್ನಡಿಗರ ಗತಿ ಏನು? ಪುಣ್ಯಕ್ಕೆ ಹೈದರಾಬಾದಿನ ಮುಖಂಡರು ಈ ವರೆಗೆ ಯಾರೂ ಹಾಗಂದಿಲ್ಲ, ಹಾಗೆ ಹಟ ಹಿಡಿಯಲಾರರೆಂಬ ಭರವಸೆ ಇದೆ.

— ಸಾಮ್ರಾಜ್ಯಶಾಹಿಯ ಯುದ್ಧ ಯೋಜನೆ —

(೧೬ನೇ ಪುಟದಿಂದ ಮುಂದರಿದುದು)

ಎರಡನೆಯದಾಗಿ, ಎಡೆಬಿಡದೆ ಕಮ್ಯೂನಿಸ್ಟ್ ವಿರೋಧ ಪ್ರಚಾರ ಮಾಡುವುದು. ಇದರಿಂದಾಗಿ ಇತರ ಎಲ್ಲಾ ಸಮಸ್ಯೆಗಳನ್ನು ಮರೆಮಾಚಿ ಬಿಡುವುದು ಸಾಧ್ಯವಿದೆ. 'ಇನ್ನೊಂದು ಯುದ್ಧ ಆಗಿಯೇ ತೀರುತ್ತದೆ. ಆದುದರಿಂದ ಪ್ರಜಾಪ್ರಭುತ್ವ ಮತ್ತು ಪ್ರಗತಿಗಾಗಿ ಇರುವ ಹೋರಾಟದಲ್ಲಿ ವಿಶ್ವಾಸವಿಡಬಾರದು. ನಿಮಗೆ ಆ ಹೋರಾಟಗಳಲ್ಲಿ ಹಿಂದೆ ಸಿಕ್ಕಿದ ಜಯಗಳನ್ನು ಮರೆತು ಬಿಡಿ' ಎಂದು ಜನತೆಯನ್ನು ಮೋಸಗೊಳಿಸುವುದು. ತಾತ್ಕಾಲಿಕ, ಅಶಾಂತಿ, ನಿರಾಶವಾದಗಳನ್ನು ಹೆಚ್ಚಿಸಿ, ಫಾಸಿಸಮ್ಮಿನ ವಿಷಬೀಜವನ್ನು ಬಿತ್ತುವುದು. ಇದರಿಂದಾಗಿ ಯುದ್ಧದ ಭೀತಿ ಇದೆಯೆನ್ನುವುದು. ತನ್ನ ನಾಶವಾಗದಂತೆ ಪ್ರಜಾಪ್ರಭುತ್ವ ಶಕ್ತಿಗಳನ್ನು ಮಾನಸಿಕವಾಗಿಯೂ, ದೈಹಿಕವಾಗಿಯೂ ನಾಶ ಮಾಡಲು ಸಾಮ್ರಾಜ್ಯಶಾಹಿ ಶಿಬಿರ ತನ್ನ ಸಕಲ ಶಕ್ತಿಯನ್ನು ವಿನಿಯೋಗಿಸುವುದು. ಇಂಥಾ ಈ ಹುಚ್ಚಿನಲ್ಲಿ ಅವರು, ಐಶಿನ್ ಹೋವರವರಂತವರ ಮಾತನ್ನು ಮರೆತು ಬಿಡುವ ಸಂಭವವಿದೆ. ಆದುದರಿಂದಲೇ ಶಾಂತಿಗಾಗಿ ಜನತೆಯ ಹೋರಾಟ ಅತ್ಯಗತ್ಯ ಮತ್ತು ಮುಖ್ಯ ಕರ್ತವ್ಯವಾಗಿದೆ. ಎಂದು ಹೇಳುವುದು.

ಪ್ರಜಾಪ್ರಭುತ್ವ ಶಿಬಿರಕ್ಕೆ ವಿಜಯ ಕಟ್ಟಿಟ್ಟದ್ದು

ಇಷ್ಟೆಲ್ಲಾ ಗಂಡಾಂತರಗಳಿದ್ದರೂ ಶಾಂತಿಗಾಗಿ ಹೋರಾಡುತ್ತಿರುವ ಪ್ರಜಾಪ್ರಭುತ್ವ ಶಿಬಿರಕ್ಕೆ ವಿಜಯ ಕಟ್ಟಿಟ್ಟದ್ದು ಎಂದು ನಿಸ್ಸಂದೇಹವಾಗಿ ಹೇಳಬಹುದು. ಜನತೆಯ ಒಗ್ಗಟ್ಟು ಮತ್ತು ಸಾಮ್ರಾಜ್ಯಶಾಹಿಗಳ ದುರ್ಬಲತೆ, ಅವರೊಳಗಿನ ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸುವುದು. ಜನತೆಗೆ ಅದು ಕೊಡಲಿಕ್ಕಿರುವುದು ಯುದ್ಧ, ಅಶಾಂತಿ, ಲಂಚ, ಸೊತ್ತುಗಳ ನಾಶ ಮತ್ತು ಫಾಸಿಸಂ ಅಲ್ಲದೆ ಬೇರೇನೂ ಅಲ್ಲ. ಸಾಮ್ರಾಜ್ಯಶಾಹಿಗಳ ಯೋಜನೆಯೆಲ್ಲವೂ ಜನತೆಗೆ ವಿರೋಧವಾಗಿ ಹೋಗುವುವು. ಜಗತ್ತಿನಲ್ಲಿ ಶಾಂತಿಪ್ರಿಯ ಜನತೆಯು ಬೆಳೆಯುತ್ತಿರುವ ಒಂದು ಶಕ್ತಿ. ಶಾಂತಿಗಾಗಿ ಒಂದು ಭದ್ರವಾದ ಸಂಯುಕ್ತರಂಗವನ್ನು ರಚಿಸುವುದು ನಮಗೆ ಸಾಧ್ಯವಾದರೆ, ಶಾಂತಿಗಾಗಿ ಇರುವ ಹೋರಾಟವನ್ನು ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವ ಮತ್ತು ಜನತೆಯ ಭಾವೀ ಹಿತಕ್ಕಾಗಿ ಇರುವ ಮಹೋರಾಟದೊಡನೆ ಒಂದುಗೂಡಿಸಿದರೆ ಈ ರಂಗದ ವಿಶ್ವಾಸವನ್ನು ಗಳಿಸಿಕೊಂಡು ಸರಿಯಾದ ಮುಂದಾಳುತನವನ್ನು ಕೊಟ್ಟರೆ. ನಮ್ಮ ಶಕ್ತಿ ಮಹಾ ಶಕ್ತಿಯಾಗುವುದು; ವಿಜಯ ಜನತೆಯದ್ದಾಗುವುದು. ಪ್ರಜಾಪ್ರಭುತ್ವದ್ದಾಗುವುದು.

ಸಮಿತಿಯ ಗತಿಯೆತ್ತ?

ಇದೇ ಜುಲೈ ೧೯ನೇ ದಿನದಿಂದ ದಿಲ್ಲಿಯಲ್ಲಿ ಪ್ರಾಂತೀಕರಣದ ಸಮಸ್ಯೆ ವಿಚಾರಿಸಲು ನಿಯಮಿಸಿದ ಸಮಿತಿ ಕೂಡಿದ್ದು ಸಂತೋಷದ ಸಂಗತಿಯಾಗಿದೆ. ಆದರೆ ಈ ಸಮಿತಿ ಭಾಷಾವಾರು ಪ್ರಾಂತ್ಯ ಗಳಾಗಬೇಕೆ ಬೇಡವೇ? ಆಗುವುದಾದರೆ ಯಾವುವು ಎಂಬುದೇ ಮೊದಲಾದ ಅನೇಕ ವಿಚಾರಗಳ ಬಗೆಗೆ ವರದಿ ಮಾಡಲು ಅಧಿಕಾರ ಪಡೆದಿದೆಯಂತೆ. ಈ ಸಮಿತಿ ಹೊರಡಿಸಿದ ಪ್ರಶ್ನೆ ಮಾಲಿಕೆ ನೋಡಿದರೆ ಅದು ಈ ವರೆಗೆ ಕಾಂಗ್ರೆಸು ಹಾಗು ಘಟನಾ ಸಮಿತಿಗಳು ಒಪ್ಪಿ, ಗೃಹೀತವಾಗಿರಿಸಿಕೊಂಡ ಸಮಸ್ಯೆಗಳನ್ನು ಪುನಃ ವಿಚಾರಣೆಗಾಗಿ ಎತ್ತುವಂತಿದೆ ಎಂದು ತಿಳಿದುಬಂದಿದೆ. ಅಲ್ಲದೆ ಘಟನಾ ಸಮಿತಿಯ ಉಪಸಮಿತಿಯಲ್ಲಿ ಗೊತ್ತಾದ ನಾಲ್ಕು ಪ್ರಾಂತಗಳ ಸಮಸ್ಯೆಯಲ್ಲದೆ ಇತರ ಪ್ರಾಂತಗಳಿಗೂ ಈ ಮಾತು ಹತ್ತಬಹುದೇ ಹೇಗೆಂಬುದನ್ನು ಈ ಸಮಿತಿ ವಿಚಾರಿಸುವುದಂತೆ.—ಇದರಿಂದ ಭಾಷಾವಾರು ಪ್ರಾಂತ ರಚನೆಯ ಕಾರ್ಯ ಮುಂದೆ ಬೀಳುವುದೆಂಬ ಸಂಶಯವು ಕರಲ್ಲಿ ಬರಹತ್ತಿದೆ. ಇಂಥ ಸಮಿತಿ ನಿಯಮಿಸುವದೆಂದರೆ ಈ ಸಮಿತಿ ಮುಂದೆ ಹಾಕುವದೇ ಸರಿ ಎಂಬ ತ್ತಿದ್ದ ದೂರದರ್ಶಿಗಳ ವಾದವು ಗುವದೇನೋ ಎಂಬ ಆಂಜಿಕೆ ತಾಗಿದೆ. ಘಟನಾ ಸಮಿತಿಯ ಉಯಲ್ಲಿ ಗೊತ್ತಾದ ಪ್ರಕಾರ ನಾಲ್ಕು ತಗಳ ಗಡಿ ನಿರ್ಣಯ ಕಮಿಟಿಗಳನ್ನು ನಿಯಮಿಸಿದ್ದರೆ ಈ ಬಗೆಯ ಸಂಶಯ ಆಸ್ಪದವಿರುತ್ತಿರಲಿಲ್ಲ. ಅದನ್ನು ಮಾ ಭಾಷಾವಾರು ಪ್ರಾಂತಗಳ ತತ್ವಗಳನ್ನು ವಿಮರ್ಶಿಸುವದು ಮತ್ತು ಯಾವ ಯಾವ ಭಾಗಕ್ಕೆ ಅವನ್ನು ಅನ್ವಯಿಸುವದು ಎಂಬ ಪ್ರಶ್ನೆಯ ಚರ್ಚೆಗೆ ಪುನಃ ಪ್ರಾರಂಭವಾದರೆ ಕೊನೆ ಎಂದು ಆದೀತೆಂದು ಯಾರು ಹೇಳಬೇಕು?

ಪ್ರಾಂತೀಕರಣ ಕೂಡಲೇ

ಕೂಡಲೇ ಶಕ್ಯವಾದರೆ ಮೈಸೂರನ್ನೊಳಗೊಂಡು ಅನಿವಾರ್ಯವಾದರೆ ಮೈಸೂರನ್ನೂ ಬಿಟ್ಟು ಇತರ ಕರ್ನಾಟಕ ಭಾಗವೆಲ್ಲ ಪ್ರತ್ಯೇಕ ಪ್ರಾಂತವಾಗುವಂತೆ ಹೆಣಗದಿದ್ದರೆ ಮುಂದೆ ಕಾಲು ಶತಮಾನಗಳವರೆಗೆ ಕೊಳೆಯಬೇಕಾದೀತೆಂದು ಹೇಳಬಹುದು. ಮೈಸೂರನ್ನೊಳಗೊಂಡು ಏಕತಂತ್ರ ಕರ್ನಾಟಕ ರಚಿಸುವ ಪ್ರಯತ್ನದಲ್ಲಿರುವ ಸಾಹಸಿಗರಿಗೆ. ನಾವು [illegible] ವು. ಆದರೆ ಜನಾಭಿಪ್ರಾಯವನ್ನು ಪಡೆದು ಏಕ ತಂತ್ರ ಕರ್ನಾಟಕದ ಸ್ವರೂಪವನ್ನು ನಿರ್ಧರಿಸಬೇಕಲ್ಲದೆ ಸರ್ವಾಧಿಕಾರದ ಕೈಯನ್ನು ಇದರಲ್ಲಿ ತೋರಿಸಿದಲ್ಲಿ ಜನತೆ ಸಹಿಸದೆಂದು ಹೇಳಬಹುದು. ಮತ್ತು ಮೈಸೂರನ್ನೊಳಗೊಂಡ ಏಕತಂತ್ರ ಕರ್ನಾಟಕದ ಸಾಹಸದಲ್ಲಿ ಮೈಸೂರನ್ನುಳಿದು ರಚಿಸಬಹುದಾದ ಕರ್ನಾಟಕವೂ ಸಾಧಿಸದೆ ಹೋಗಬಹುದೆಂಬ ಆಜ್ಞೆ ಇಲ್ಲವಾಗಿರುವದರಿಂದ ಗೋಡೆಯ [illegible] ಮೊದಲೇ ನೆರಕೆಯನ್ನು [illegible]